MADAM SPEAKER.—The first Bill is not a money Bill.

Sri M. Y. GHORPADE.—Ibeg to introduce:

"The Karnataka Civil Services (Revision of Pay of certain Categories of Posts) Bill, 1975."

MADAM SPEAKER.—The Bill is introduced.**

Karnataka Sales Tax Amenement Bill, 1975—Indroduction.

MADAM SPEAKER.—I have received the recommendation of the Governor under article 207 (1) of the Constitution for the introduction of the Karnataka Sales Tax (Amendment) Bill ,1975.

Sri M. Y. GHORPADE.—I beg to introduce:

"The Karnataka Sales Tax (Amendment) Bill, 1975."

MADAM SPEAKER.—The Bill is introduced.**

K. C. S. Classification and Scale of pay of non-Graduate Junier Engineers of the PWD Bill, 1975—Introdction.

Sri S. M. KRISHNA.—On behalf of Sri H. M. Channabasappa, Minister for Public Works, I beg to introduce:

"The Karnataka Civil Services (Classification and Seales of Pay of non-graduate Junior Engineers of the Public Works Department) Bill, 1975"

MADAM SPEAKER.—The Bill is introduced.**

Motion *re* : Ratificction to the Amendements in the Constitution of India 36th Amendment) Bill, 1974

Sri S. M. KRISHNA (Minister for Industries and Parliamentary Affairs).—I beg to move :

"That this House ratifies the amendments to the Constitution of India falling within the purview of the proviso to clause (2) of article 368 thereof proposed to be made by the Constitution (Thirty-sixth Amendment) Bill 1974, as passed by the two Houses of Parliament, which seeks to give effect to the wishes of the people of Sikkim for strengthening Indo-Sikkim co-operation and inter-relationship and the shorttitle of which has been changed into "The Constitution(Thirty-fifth Amendment) Act, 1974'."

MADAM SPEAKER.—Motion moved:

"That this House ratifies the amendments to the Constitution of India falling within the purview of the proviso to clause (2) of article 368 thereof proposed to be made by the Constitution (Thirty-sixth Amendment) Bill,1974, as passed by the two Houses of Parliament, which seeks to give effect to the wishes of the people of Sikkim for strengthening Indo-Sikkim co-operation and inter-relationship and the short title of which has been changed into "The Constitution (Thirty-fifth Amendment) Act, 1974'."

** Bills, appended as Annexures to this Volume.

ಜನತಾ ಪ್ರವಾಹ ಬಂದುಬಿಟ್ಟು ಭಾರತ ದೇಶದಲ್ಲಿ ಇನ್ನೂ ಹೆಚ್ಚಿನ ಬಾಂಧವ್ಯವನ್ನು ಸ್ಥಾಪನೆ ಮಾಡಬೇಕೆನ್ನುವ ಕಳಕಳಿ ಅಲ್ಲಿನ ಜನತೆಯಲ್ಲಿ ಮೂಡಿ ಬಂದಿತು. ಮತ್ತು ಇತ್ತೀಚೆಗೆ ಅಲ್ಲಿ ಚುನಾವಣೆಗಳು ನಡೆದಾಗ ಸಿಕ್ಕಿಂ ರಾಜ್ಯದವರು ಭಾರತದೊಡನೆ ಅತಿ ಹತ್ತಿರದ ಸಂಬಂಧವನ್ನು ಇಟ್ಟುಕೊಳ್ಳಬೇಕೆಂದು ಆ ರಾಜ್ಯದ ಚುನಾವಣಾ ಪ್ರಣಾಳಿಕೆಯಲ್ಲೂ ಘೋಷಿಸಿದ್ದರು. ಅವರಂತೆ ಆ ರಾಜ್ಯದ ಚುನಾವಣಾ ಫಲಿತಾಂಶ ನೋಡುವಾಗ ಇದು ಸ್ಪಷ್ಟವಾಗಿ ಕಂಡು ಬರುತ್ತದೆ. ಇದರಂತೆ ಆ ರಾಜ್ಯದವರು ನಮ್ಮ ಭಾರತ ರಾಷ್ಟ್ರಕ್ಕೆ ಒಂದು ಮನವಿ ಸಲ್ಲಿಸಿ ನಮ್ಮ ಭಾರತದೊಡನೆ ವಿಶೇಷವಾದ ಬಾಂಧವ್ಯವನ್ನು ಸ್ಥಾಪನೆ ಮಾಡುವುದಕ್ಕೋಸ್ಕರ ಪ್ರಯತ್ನ ನಡೆಸಿತು. ಅದು ನಡೆದದ್ದು ಮೇ ಎಂಟನೇ ತಾರೀಖು 1973ರಲ್ಲಿ ಇದೊಂದು ಚರಿತ್ರಾರ್ಹವಾದ ಹೊಸ ಅಧಿನಿಯಮವನ್ನು ನಮ್ಮ ರಾಜ್ಯಾಂಗಕ್ಕೆ ಸೇರಿಸಿ ಅಳವಡಿಸಬೇಕೆಂದು ಪ್ರಾರ್ಥನೆ ಬಂದಿತು. ಇದಾದ ನಂತರ 1974ರಲ್ಲಿ ನಮ್ಮ ಭಾರತದ ಸಂವಿಧಾನದ ಚೌಕಟ್ಟಿನಲ್ಲಿ ಇದಕ್ಕೆ ಒಂದು ರೀತಿಯಾದ ಸ್ಟೇಟಸ್ ಕೊಡಬೇಕೆಂದು ಅದಕ್ಕೋಸ್ಕರ ಆರ್ಟಿಕಲ್ (2) ಎಂದು ಹೊಸದಾಗಿ ಸೇರಿಸಿ ಇದರ ಮೂಲಕ ನಮ್ಮ ಭಾರತದೇಶ ಮತ್ತು ಸಿಕ್ಕಿಂನೊಡನೆ ಇನ್ನೂ ಹೆಚ್ಚು ಬಾಂಧವ್ಯವನ್ನು ಸ್ಥಾಪನೆ ಮಾಡುವುದಕ್ಕಾಗಿ ಇದರಲ್ಲಿ ಒಂದು ಹೊಸ ಷೆಡ್ಯೂಲ್‌ನ್ನು ಸೇರಿಸಿ ರಾಜ್ಯಾಂಗಕ್ಕೆ ಒಂದು ಹೊಸ ತಿದ್ದುಪಡಿಯನ್ನು ಮಾಡಿ ಅದನ್ನು ಲೋಕಸಭೆಯ ಅಂಗೀಕಾರಕ್ಕಾಗಿ ತಂದು ಪಾಸು ಮಾಡಿದ್ದಾರೆ. ಇದನ್ನು ಇತರ ರಾಜ್ಯಗಳವರ ಅನುಮೋದನೆಗಾಗಿ ಕಳುಹಿಸಿದ್ದಾರೆ. ಇವೆರಡು ರಾಜ್ಯಗಳ ಮಧ್ಯೆ ಇರತಕ್ಕ ಐತಿಹಾಸಿಕ ಸಂಬಂಧವನ್ನು ಗಮನಿಸಿ ನಮ್ಮ ಸಂಸತ್ತು ಇಂತಹ ಒಂದು ನಿರ್ಣಯವನ್ನು ಮಾಡಿ ಇಲ್ಲಿಗೆ ಕಳುಹಿಸಿಸಿದೆ. ಈಗಾಗಲೇ ಕೆಲವು ರಾಜ್ಯಗಳು ಇದನ್ನು ಅನುಮೋದನೆ ಮಾಡಿವೆ ಮತ್ತು ನಮ್ಮ ಲೋಕಸಭೆಯಲ್ಲಿ ಸರ್ವಾನುಮತದಿಂದ ಅನುಮೋದನೆಯಾಗಿರುವ ಈ ನಿರ್ಣಯವನ್ನು ನಮ್ಮ ಈ ಸದನದಲ್ಲೂ ಒಪ್ಪಿ ಒಮ್ಮತದಿಂದ ಇದಕ್ಕೆ ಬೆಂಬಲ ನೀಡಬೇಕೆಂದು ಹೇಳಿ ಈ ನಿರ್ಣಯವನ್ನು ಈ ಸಭೆಯ ಅವಗಾಹನೆಗಾಗಿ ಇಲ್ಲಿ ಮಂಡಿಸುತ್ತಿದ್ದೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಅಧ್ಯಕ್ಷರೇ ಸಿಕ್ಕಿಂ ಹಾಗೂ ಭಾರತದ ಬಾಂಧವ್ಯ ಸುಮಾರು ನೂರಾರು ವರ್ಷಗಳೇ ಏಕೆ ಸಾವಿರಾರು ವರ್ಷಗಳಿಂದಲೂ ಬೆಳೆದುಕೊಂಡು ಬಂದಿದೆ, ಭೌಗೋಳಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಈ ರಾಜ್ಯ ಭಾರತದೊಡನೆ ತನ್ನ ಬಾಂಧವ್ಯವನ್ನು ಬೆಳಸಿಕೊಂಡು ಬರುತ್ತಿದೆ. ಇದು ಭಾರತದ ಇತರ ರಾಜ್ಯಗಳಲ್ಲಿ ಒಂದು ರಾಜ್ಯದಂತೆ ಆಗಬೇಕಾಗಿತ್ತು. ಆಗಿದ್ದ ಸಿಕ್ಕಿಂ ಮಹಾರಾಜರೂ ಕೂಡ ಇದನ್ನು ಒಪ್ಪಬೇಕೆಂದು ಭಾರತ ರಾಜ್ಯವನ್ನು ಕೇಳಿಕೊಂಡಿತ್ತು. 1950ರಲ್ಲೇ ಈ ಸಿಕ್ಕಿಂ ರಾಜ್ಯ ನಮ್ಮ ಭಾರತದೊಡನೆ ವಿಲೀನವಾಗಬೇಕಾಗಿತ್ತು. ಆದರೆ ಆಗ ಇದ್ದ ದಿವಂಗತ ಶ್ರೀ ಪಂಡಿತ ಜವಹರಲಾಲ ನೆಹರೂರವರು ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕೆ ವಿನಾ ಅಲ್ಲಿರುವ ರಾಜರುಗಳ ಅಭಿಪ್ರಾಯಕ್ಕೆ ಮನ್ನಣೆ ಕೊಡುವುದು ಸರಿಯಲ್ಲ ಎಂದು ಆಗ ಆಗಬೇಕಾಗಿದ್ದ ವಿಲೀನವನ್ನು ಬಾಗಿಲಿತ್ತಿದ್ದರು. ಆಗಲೇ ಇಂತಹ ಒಂದು ಚರಿತ್ರಾರ್ಹವಾದ ಸೂಚನೆ ಬಂದಾಗ ಅದನ್ನು ಸ್ವಾಗತಿಸಿ ಸಾರ್ವಭೌಮರೂ ಅದಕ್ಕೆ ತಕ್ಕ ಶಹಬಾಸುಗಿರಿಯನ್ನೂ ಕೊಡಬೇಕಾಗಿತ್ತು. ಆಗ ಸಿಕ್ಕಿಂ ರಾಜ್ಯವನ್ನು ಪ್ರೊಟೆಕ್ಟೊರೇಟ್ ಎಂದು ಮಾಡಲಾಗಿತ್ತು. ಚೀನಾ ಹಾಗೂ ಅಮೇರಿಕಾ ದೇಶಗಳು ಭಾರತಕ್ಕೆ ವಿರುದ್ಧವಾಗಿರುವಂತಹ ಈ ಸಮಯದಲ್ಲಿ ಅಲ್ಲಿನ ಜನರೇ ಸಿಕ್ಕಿಂನಲ್ಲಿರುವ ಶಾಸನ ಸಭೆಯಲ್ಲಿ ನಿರ್ಣಯವನ್ನು ಮಂಡಿಸಿ ಅವಕ್ಕೆ ತಕ್ಕಂತೆ ನಮ್ಮ ರಾಜ್ಯಾಂಗದಲ್ಲಾ ತಿದ್ದುಪಡಿ ಮಾಡಬೇಕೆಂದು ಕೇಳಿದ್ದಾರೆ. ಆ ಪ್ರಕಾರ ಭಾರತ ಸರಕಾರ ಸಿಕ್ಕಿಂ ರಾಜ್ಯದವರು ಮಂಡಿಸಿದ ನಿರ್ಣಯಕ್ಕನುಗುಣವಾಗಿ ಇಲ್ಲೂ ಕೂಡ ಒಂದು ನಿರ್ಣಯವನ್ನು ತಂದಿದ್ದಾರೆ. ಸಿಕ್ಕಿಂ ಜನತೆಯ ಅಭಿಮತಕ್ಕನುಗುಣವಾಗಿ ಅವರು ಮಾಡಿರುವುದನ್ನು ಒಪ್ಪುವುದು ಅಗತ್ಯ. ಮತ್ತೂ ರಕ್ಷಣೆಯ ಜವಾಬುದಾರಿಯನ್ನು ಕೊಂಡಿರುವ ಭಾರತ ಆ ರಾಜ್ಯಕ್ಕೆ ಸಹಭಾಗಿತ್ವದ ಅವಕಾಶ ಕೊಡಲು ಭಾರತದ ಸಂಸತ್ತಿನಲ್ಲಿ ಇಬ್ಬರು ಸದಸ್ಯರ ಪ್ರಾತಿನಿಧ್ಯಕ್ಕೆ ಅವಕಾಶ ಕೊಡಬೇಕೆಂದು ಕೇಳಿರುವುದು ಏನು ಇದೆ ಅದು ಕೇವಲ ಒಂದು ಔಪಚಾರಿಕ ವಿಧಿ. ನಮ್ಮ ರಾಜ್ಯದೊಡನೆ ಸಹ ಭಾಗಿತ್ವಕ್ಕೆ ಅವರು ಅಪೇಕ್ಷೆ ಮಾಡಿರುವಾಗ ಅವರನ್ನು ಭಾರತದ ರಾಜ್ಯದೊಡನೆ ಸೇರಿಸಿಕೊಳ್ಳಲು ಯಾವ ಅಭ್ಯಂತರವೂ ಇರುವುದಿಲ್ಲ. ಅದರಂತೆ ರಾಜ್ಯಾಂಗದ ಆರ್ಟಿಕಲ್ (2) ರಲ್ಲಿ ಒಂದು ತಿದ್ದುಪಡಿ ತಂದು ಇದರ ಮೂಲಕ ನಮ್ಮ ರಾಜ್ಯಾಂಗದೊಡನೆ ಸೇರಿಸುವ ಒಂದು ನಿರ್ಣಯವನ್ನೂ ಅಲ್ಲಿ ತಂದಿದ್ದಾರೆ. ಸಿಕ್ಕಿಂ ರಾಜ್ಯದ ಹಾಗೂ ಭಾರತದೇಶದ ಬಾಂಧವ್ಯವನ್ನು ಉತ್ತಮಪಡಿಸಬೇಕೆಂದು ಅಂತಹ ಒಂದು ನಿರ್ಣಯವನ್ನು ಅಲ್ಲಿ ತಂದಿದ್ದಾರೆ. ಇವಕ್ಕೆ ಹೊರತು ಕೂಡ ಸಿಕ್ಕಿಂ ರಾಜ್ಯದ ರಕ್ಷಣೆ, ಸಾರಿಗೆ ಸಂಪರ್ಕ ಹಾಗೂ ವಿದೇಶಾಂಗ ಇವು ಮೂರು ಆರ್ಟಿಕಲ್ (1)ಗೆ ಸೇರಿಸಿ ಇದರ ರಕ್ಷಣಾ ಜವಾಬುದಾರಿಯನ್ನೂ ಭಾರತ ರಾಜ್ಯ ನೋಡಿಕೊಂಡು ಸಹಾಯ ಮಾಡುತ್ತಿದ್ದರು. ನಮ್ಮ

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ಜೊತೆಯಲ್ಲಿ ಸಹಭಾಗಿತ್ವವನ್ನು ಹೊಂದಬೇಕೆಂದು ಅಲ್ಲಿನ ಜನತೆ ಬಹಳ ಹಿಂದಿನಿಂದಲೂ ಕೇಳಿ ಕೊಂಡು ಬರುತ್ತಿದೆ. ಇದಕ್ಕೆ ಅನುಸಾರವಾಗಿ ಒಂದು ಚಿರಿತ್ರಾರ್ಹವಾದ ನಿರ್ಣಯವನ್ನು ನಮ್ಮ ಭಾರತದ ಪ್ರಧಾನಿಯವರು ಶ್ರೀಮಾನ್ ನ್ಯರ್ನ್‌ಸಿಂಗರ ಮೂಲಕ ಲೋಕ ಸಭೆಯಲ್ಲಿ ಮಂಡಿಸಿ ಅದನ್ನು ಈಗಾಗಲೇ ಪಾಸು ಮಾಡಿದ್ದಾರೆ. ಇದರಿಂದ ಪ್ರಜಾಪ್ರಭುತ್ವಕ್ಕೆ ತಕ್ಕ ಮನ್ನಣೆ ಕೊಟ್ಟಂತಾಗುತ್ತದೆ. ಅಂತಹ ಒಂದು ನಿರ್ಣಯವನ್ನು ನಾವು ಕೂಡ ಇಲ್ಲಿ ಒಪ್ಪತಕ್ಕ ಔದಾರ್ಯವನ್ನು ತೋರಿಸಬೇಕಾಗಿದೆ. ಈ ಹಿಂದೆಯೇ ನಮ್ಮ ಇತರ ರಾಜ್ಯಗಳಂತೆ ಸಿಕ್ಕಿಂ ರಾಜ್ಯವನ್ನು ಒಂದು ರಾಜ್ಯದಂತೆ ಪರಿಗಣಿಸಬೇಕಾಗಿತ್ತು. ಆದರೆ ಇದುವರೆಗೆ ಅದು ಆಗಲಿಲ್ಲ. ಹಿಂದೆ ಅಲ್ಲಿದ್ದ ವಸಾಹತುಷಾಹಿ ರಾಜರುಗಳ ಪ್ರಭುತ್ವವನ್ನು (ಪ್ರೊಟೆಕ್ಟೊರೇಟ್) ಒಪ್ಪುವುದಕ್ಕಿಂತ ಪ್ರಜೆಗಳಿಂದ ಬಂದಿರತಕ್ಕ ಕೋರಿಕೆಗೆ ಈಗ ಮನ್ನಣೆ ಕೊಟ್ಟು ನಾವು ಗೌರವಿಸಬೇಕಾಗುತ್ತದೆ. ಅದಕ್ಕಾಗಿ ನು ಗುಣವಾಗಿ ನಮ್ಮ ಸರಕಾರ ಕೂಡ ಇಲ್ಲಿ ಇಂತಹ ನಿರ್ಣಯ ತಂದು ಮಂಡಿಸಿದ್ದಾರೆ. ಇದನ್ನು ಎಲ್ಲರೂ ಒಪ್ಪತಕ್ಕದ್ದು ಅಗತ್ಯ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಸಿಕ್ಕಿಂ ರಾಜ್ಯ 1861ರಲ್ಲಿ ಬ್ರಿಟಿಷ್‌ರ ಆಳ್ವಿಕೆಗೆ ಒಳಪಟ್ಟಿತ್ತು. ಅನಂತರ 1950ರಲ್ಲಿ ಬ್ರಿಟಿಷ್ ಸರಕಾರದೊಡನೆ ಆದ ಅಗ್ರಿಮೆಂಟು ಪ್ರಕಾರ ಈ ರಾಜ್ಯ ನಮ್ಮ ಭಾರತದೊಡನೆ ಸಂಪರ್ಕವನ್ನು ಪಡೆದಿತ್ತು. ಇದು ಭಾರತ ದೇಶಕ್ಕೆ ಒಂದು ರೀತಿಯ ಸ್ಯಾಟಿಜಿತ್ ಪಾಯಿಂಟು ಆಗಿತ್ತು ಮತ್ತು ಒಂದು ರೀತಿ ಯಾಗಿ ಭಾರತದೊಡನೆ ಹೊಂದಿಕೊಂಡು ಹೋಗುವುದು ಇದರ ಹಿತದೃಷ್ಟಿಯಿಂದ ಒಳ್ಳೆಯದೂ ಆಗಿತ್ತು.

ನಾನು ಕೆಲವು ವಿಷಯಗಳನ್ನು ಹೇಳುವುದಕ್ಕೆ ಅಪೇಕ್ಷೆ ಮಾಡುತ್ತೇನೆ. ಇದು ಈಗಾಗಲೇ ಪಾರ್ಲಿಮೆಂಟ್‌ನಲ್ಲಿ ಬರ್ಚೆಯಾಗಿರುವ ವಿಷಯ. ಇದು ಬಹಳ ಬಹಳ ಮುಖ್ಯವಾದಂತಹ ಪ್ರಶ್ನೆ. ಈ ಬಗ್ಗೆ ನನ್ನ ಒಂದು ಮುಖ್ಯವಾದ ಪ್ರತಿಭಟನೆ ಏನು ಎಂದರೆ ರಾಜ್ಯಾಂಗವನ್ನು ಪದೇ ಪದೇ ಬದಲಾ ವಣೆ ಮಾಡುತಾ ಇರತಕ್ಕದ್ದು ಪ್ರಜಾಪ್ರಭುತ್ವ ತತ್ವಕ್ಕೆ ಅಷ್ಟು ಉತ್ತಮ ವಾದುದಲ್ಲ. ರಾಜ್ಯಾಂಗಕ್ಕೆ ಈಗಾಗಲೇ ಅನೇಕ ಬದಲಾವಣೆಗಳು ಆಗಿವೆ. ಈಗ ತಂದಿರತಕ್ಕದ್ದು 36 ನೇ ಬದಲಾವಣೆ. ಇಂಥಾ ಒಂದು ಅತಿ ಮುಖ್ಯವಾದ ವಿಚಾರಗಳನ್ನು ತೀರ್ಮಾನ ತೆಗೆದುಕೊಂಡ ಮೇಲೆ, ಒಪ್ಪಂದ ಅದಮೇಲೆ ಪಾರ್ಲಿಮೆಂಟ್ ಮುಂದಾಗಲೀ ರಾಜ್ಯಸಭೆಯ ಮುಂದಾಗಲೀ ತರುತ್ತಾರೆ. ಆದ್ದರಿಂದ ಇದು ಒಂದು ಪ್ರಜಾಪ್ರಭುತ್ವತತ್ವಕ್ಕೆ ವಿರೋಧವಾದುದು. ಈಗಾಗಲೇ ಈ ಬಗ್ಗೆ ತೀರ್ಮಾನ ತೆಗೆದುಕೊಂಡು ಬರೀ ಹೆಬ್ಬಟ್ಟು ಗುರುತು ಹಾಕುವುದಕ್ಕೆ ಈಗ ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ರೀತಿ ಮಾಡುವುದು ಅಷ್ಟು ಉತ್ತಮವಾದುದಲ್ಲ. ಇದರ ಜೊತೆಗೆ ಇದರಲ್ಲಿ ಏನಾಗಿದೆ ಎಂದರೆ ಇದಲ್ಲಿ ಫೈನಾನ್ಷಿಯಲ್ ಕಮಿಟ್‌ಮೆಂಟ್ ಇಲ್ಲ ಬರೀ ಕೇವಲ ಎರಡು ಮುಖ್ಯವಾದ ವಿಷಯಗಳು ಎಂದು ಹೇಳಿದ್ದಾರೆ. ಪ್ರೊಟೆಕ್ಟೊರೇಟ್ ಆಗಿದ್ದಂತಹ ಸಿಕ್ಕಿಂ ಈಗ ಅಸೋಸಿಯೇಷನ್ ಪ್ರಾಂತ ಆಗಿರಬೇಕಾಗುತ್ತದೆ. ಆದ್ದರಿಂದ ಈಗ ಇರತಕ್ಕಂಥಾ ರಾಜ್ಯಾಂಗದಲ್ಲಿ ಸಿಕ್ಕಿಂಗೆ ರಾಜ್ಯ ಸಭೆಯಲ್ಲಿ ಒಂದು ಸ್ಥಾನ ಮತ್ತು ಪಾರ್ಲಿಮೆಂಟ್‌ನಲ್ಲಿ ಒಂದು ಸ್ಥಾನ ಕೊಡಬೇಕು ಎನ್ನತಕ್ಕಂಥಾದ್ದು ಒಂದು ತೀರ್ಮಾನ ಇದರಲ್ಲಿ ಇದೆ. ಇದರ ಜೊತೆಗೆ ಅಲ್ಲಿಂದ ಬರತಕ್ಕ ಪ್ರತಿನಿಧಿಗಳಿಗೆ ಪ್ರೆಸಿಡೆಂಟ್ ಮತ್ತು ವೈಸ್‌ಪ್ರೆಸಿಡೆಂಟ್ ಅವರನ್ನು ಚುನಾವಣೆ ಮಾಡತಕ್ಕ ಹಕ್ಕು ಬಾಧ್ಯತೆ ಮತ್ತು ಇತರ ಎಲ್ಲಾ ಅಧಿಕಾರವುಂಟು ಎಂದು ಹೇಳಿದ್ದಾರೆ. ಇದರಲ್ಲಿ ಒಂದು ವಿಚಾರವನ್ನು ಎತ್ತಿ ತೋರಿಸ ಬೇಕಾದರೆ ಇದರ ಫೈನಾನ್ಷಿಯಲ್ ಮೆಮೋರಾಂಡಂ ನೋಡಿದರೆ ಇದರಲ್ಲಿ ನಮಗೆ 60 ಸಾವಿರ ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗುವುದಿಲ್ಲ ಎಂದು ಹೇಳುತ್ತಾರೆ. ಇದರಲ್ಲಿ ಹಿಂದೆ ಇದ್ದ ಎಲ್ಲಾ ಜವಾಬ್ದಾರಿಯನ್ನೂ ಮುಂದುವರಿಸಿಕೊಂಡು ಹೋಗುತ್ತೇವೆಂದು 10ನೇ ಷೆಡ್ಯೂಲ್‌ನಲ್ಲಿ ಹೇಳಿರುವು ದರಿಂದ ಇದಕ್ಕೆ 60 ಸಾವಿರ ರೂಪಾಯಿಗಳಿಗಿಂತ ಸ್ವಲ್ಪ ಹೆಚ್ಚಿನ ರೀತಿಯಲ್ಲೇ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇವರು ಸ್ವಲ್ಪ ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ ಎಂಥು ಇದರಲ್ಲಿ ಗೊತ್ತಾಗುತ್ತದೆ. ಹೆಚ್ಚಿನ ಜವಾಬ್ದಾರಿಯನ್ನು ತೆಗೆದುಕೊಂಡರೂ ಫೈನಾಷಿಯಲ್ ಮೆಮೋರಾಂಡಂನಲ್ಲಿ ಕೊಟ್ಟಿರುವ ಹಾಗೆ ಖರ್ಚು ಕಡಿಮೆಯಾಗುತ್ತದೆ ಎಂಬುದನ್ನು ಒಪ್ಪುವುದ ಕ್ಕಾಗುವುದಿಲ್ಲ.

ನಮ್ಮ ಪ್ರಧಾನಿಗಳು ಕೆಲವು ವಿಚಾರಗಳ ಬಗ್ಗೆ ನಾವು ಪೂರ್ಣವಾಗಿ ವಿರೋಧ ಮಾಡಿದರೂ ಈಸ್ಟ್‌ಬೆಂಗಾಲ್ ವಿಚಾರದಲ್ಲಿ ನಡೆದುಕೊಂಡು ವಿಚಾರ ಮತ್ತು ಪಾಕೀಸ್ತಾನದ ವಿಷಯದಲ್ಲಿ

ನಡೆದುಕೊಂಡ ನೀತಿಯ ವಿಚಾರದಲ್ಲಿ ನಾವು ಮೆಚ್ಚಿಗೆಯನ್ನು ತೋರಿಸದೆ ಹೋದರೆ ಅದು ತಪ್ಪಾಗುತ್ತದೆ. ನಮ್ಮ ಭಾರತದ ನೆರೆ ರಾಜ್ಯಗಳು ಯಾವುವು ಇವೆ ಅವು ನಮ್ಮ ಭಾರತದ ಬಗ್ಗೆ ಯಾವ ವಿಧವಾದ ಒಂದು ಪ್ರೀತಿವಿಶ್ವಾಸವನ್ನು ಹೊಂದಿವೆ ಎಂಬುದನ್ನು ನೋಡಿದರೆ ಅದು ಶೋಚನೀಯವಾದ ವಿಚಾರ. ಅವು ತಮ್ಮ ವಕ್ರದೃಷ್ಟಿಯನ್ನು ಇಂಡಿಯಾದೇಶದ ಮೇಲೆ ಇಟ್ಟುಕೊಂಡಿವೆ. ಇಂಡಿಯಾದೇಶದ ಹಿತರಕ್ಷಣೆಯ ವಿಚಾರದಲ್ಲಿ ಸೌಹಾರ್ದತೆ ಇಲ್ಲ. ಯಾವೊತ್ತಾದರೂ ಕೂಡ ಈ ಬಗ್ಗೆ ಭಾರತಕ್ಕೆ ಪೆಟ್ಟು ಬೀಳತಕ್ಕ ಸಂದರ್ಭ ಇದೆ. ಈ ಸಂದರ್ಭದಲ್ಲಿ ಇದನ್ನು ದಿಟ್ಟತನದಿಂದ ಎದುರಿಸುವುದಕ್ಕೆ ಸಾಧ್ಯವಾದಷ್ಟೂ ಉಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಪಾಕೀಸ್ತಾನದ ಜೊತೆಯಲ್ಲಿ ಸಿಮ್ಲಾ ಒಪ್ಪಂದ ಮಾಡಿಕೊಳ್ಳುವಾಗ ಸ್ವಲ್ಪ ವಿಚಾರ ಮಾಡಿ ವ್ಯವಹರಿಸಿ ಚರ್ಚೆ ಮಾಡಿ ನಿಧಾನವಾಗಿ ತೀರ್ಮಾನ ತೆಗೆದುಕೊಂಡಿದ್ದರೆ ಚೆನ್ನಾಗಿತ್ತು. ಏತಕ್ಕೆಂದರೆ ಈಗ ಅನೇಕ ಕಡೆ ಆಗುತ್ತಾ ಇರತಕ್ಕ ಅನಾಹುತಗಳನ್ನು ನಾವು ಪ್ರತಿನಿತ್ಯ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಆದ್ದರಿಂದ ನ್ಯಾಯವಾದ ರೀತಿಯಲ್ಲಿ ನಾವು ತೀರ್ಮಾನಗಳನ್ನು ತೆಗೆದುಕೊಳ್ಳದೇ ಹೋದರೆ ಹೆಚ್ಚಿನ ದುಡ್ಡನ್ನು ಖರ್ಚು ಮಾಡಿದರೂ ಕೂಡ ಭಾರತದ ಹಿತ ರಕ್ಷಣೆಯಾಗುವುದಿಲ್ಲ. ಸಿಮ್ಲಾ ಒಪ್ಪಂದದ ಮುಖಾಂತರ ಪಾಕೀಸ್ತಾನದ ಜೊತೆಯಲ್ಲಿ ಮಾಡಿಕೊಂಡ ತೀರ್ಮಾನಗಳಲ್ಲಿ ಪ್ರತಿಯೊಂದು ಸಂದರ್ಭದಲ್ಲಿಯೂ ಕೃತಜ್ಞತೆಯನ್ನು ತೋರಿಸದೆ ಅವರು ನಾನಾ ರೀತಿಯಲ್ಲಿ ಭಾರತಕ್ಕೆ ವಿರುದ್ಧವಾಗಿ ನಡೆದುಕೊಳ್ಳತಕ್ಕ ಅಂಶಗಳನ್ನು ನಾವು ನೋಡಬೇಕಾಗಿದೆ. ನಮಗೆ ಅವರಿಂದ ಯಾವ ವಿಧವಾದ ಸೌಹಾರ್ದತೆ ಸ್ನೇಹಭಾವನೆ ಕಾಣದೆ ಇರುವುದು ಶೋಚನೀಯವಾದ ವಿಚಾರ. ಬಾಂಗ್ಲಾದೇಶ ಸ್ವತಂತ್ರವಾಗಬೇಕು ಎನ್ನುವ ದೃಷ್ಟಿಯಿಂದ ಭಾರತ ಸರ್ಕಾರ ಬೇಕಾದಷ್ಟು ಪ್ರಯತ್ನ ಮಾಡಿದೆ. ಇದರ ಬಗ್ಗೆ ವಿರೋಧ ಮಾಡುವುದಕ್ಕಾಗುವುದಿಲ್ಲ. ಮುಖ್ಯವಾಗಿ ರಾಜಕೀಯ ವಿಚಾರದಲ್ಲಿ ಭಾರತ ಒಂದು ನಿಲುವನ್ನು ತೆಗೆದುಕೊಳ್ಳಬೇಕಾಗಿತ್ತು. ಅನೇಕ ಸಂದರ್ಭಗಳಲ್ಲಿ ತುರ್ತು ಪರಿಸ್ಥಿತಿಯಲ್ಲಿ ದೇಶದ ವಾತಾವರಣ ಎಷ್ಟು ಹಿತಕರವಾಗಿರಬೇಕಾಗಿತ್ತೊ ಅಷ್ಟು ಹಿತಕರವಾಗಿಲ್ಲ. ಅನೇಕ ವಿಚಾರಗಳಲ್ಲಿ ಯಾರಿಗೆ ನ್ಯಾಯವಾಗಿ ಅಧಿಕಾರದಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶವಿಲ್ಲವೋ ಅಂಥವರನ್ನು ಅಧಿಕಾರದಲ್ಲಿ ಕೂರಿಸಿ ಯಾರಿಗೆ ನ್ಯಾಯವಾಗಿ ಅಧಿಕಾರದಲ್ಲಿ ಕುಳಿತುಕೊಳ್ಳುವುದಕ್ಕೆ ಅಧಿಕಾರ ಇದೆಯೋ ಅವರಿಗೆ ಅಧಿಕಾರ ಸಿಕ್ಕದೇ ಇರುವಂತಹ ಪರಿಸ್ಥಿತಿ ನಮ್ಮಲ್ಲಿ ಕಾಣುತ್ತಿದೆ. ಭಾರತ ಸರ್ಕಾರದ ನೀತಿಯ ಬಗ್ಗೆ ಅನೇಕ ಸಂದರ್ಭಗಳಲ್ಲಿ ದೇಶದ ಹಿತದೃಷ್ಟಿಯಿಂದ ಸರಿಯಾದ ರೀತಿಯಲ್ಲಿ ಯೋಚನೆ ಮಾಡಿ ತೀರ್ಮಾನವನ್ನು ತೆಗೆದುಕೊಳ್ಳದೆ ಅವಸರ ಅವಸರವಾಗಿ ತೀರ್ಮಾನವನ್ನು ತೆಗೆದುಕೊಂಡರೆ ನಮ್ಮ ದೇಶಕ್ಕೆ ದುಡ್ಡು ಖರ್ಚಾಗುತ್ತದೆಯೆ ಹೊರತು ದೇಶದ ಹಿತರಕ್ಷಣೆ ಯಾಗುವುದಿಲ್ಲ. ಆದ್ದರಿಂದ ಇಂಥಾ ವಿಚಾರಗಳಲ್ಲಿ ಸಾಕಷ್ಟು ಯೋಚನೆ ಮಾಡಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ನಮ್ಮ ದೇಶದ ಪ್ರತಿಯೊಂದು ಮೂಲೆಯಲ್ಲಿಯೂ ಕೂಡ ಶತ್ರುಗಳು ನಮ್ಮ ಮೇಲೆ ವಕ್ರ ದೃಷ್ಟಿಯನ್ನು ಇಟ್ಟುಕೊಂಡಿರುವಾಗ ನಾವು ಎಚ್ಚರಿಕೆಯಿಂದ ಇಲ್ಲದಿದ್ದರೆ ಭಾರತಕ್ಕೆ ಪೆಟ್ಟು ಬೀಳತಕ್ಕ ಅವಕಾಶ ಇರುವುದರಿಂದ ಮುಖ್ಯವಾದ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಅವಸರ ಅವಸರವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳದೆ ಸಾಕಷ್ಟು ಎಚ್ಚರಿಕೆಯನ್ನು ವಹಿಸಿ ಯೋಚನೆ ಮಾಡಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕೇ ಹೊರತು ದಿಡೀರ್ ಎಂದು ತೀರ್ಮಾನವನ್ನು ತೆಗೆದುಕೊಳ್ಳುವುದು ಸರಿಯಲ್ಲ. ದೇಶದ ಹಿತರಕ್ಷಣೆಯನ್ನು ಮಾಡುವಂತೆ ಯೋಚನೆ ಮಾಡಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು. ಪೆಜಾರಿಟಿ ಇರುವುದರಿಂದ ಇದನ್ನು ಪಾರ್ಲಮೆಂಟ್‌ನಲ್ಲಿ ಇಟ್ಟು ಈಗ ನಾವು ಅರಣ್ಯರೋದನೆ ಮಾಡು ಎಂದು ಈ ಸಭೆಯಲ್ಲಿ ತಂದಿದ್ದಾರೆ. ಈಗ ಇದನ್ನು ನಾವು ಚರ್ಚೆ ಮಾಡುವುದರಿಂದ ಯಾವ ಪ್ರತಿಫಲವೂ ದೊರೆಯುವುದಿಲ್ಲ. ಈಗಾಗಲೇ ಈ ಬಗ್ಗೆ ತೀರ್ಮಾನವನ್ನು ತೆಗೆದುಕೊಡು ಈಗ ಇಲ್ಲಿ ನುಮ್ಮನೆ ಕಣ್ಣೊರೆಸುವ ದೃಷ್ಟಿಯಿಂದ ಇದನ್ನು ತಂದಿದ್ದಾರೆ. ಇದನ್ನು ಪೋಸ್ಟ್ ಮಾರ್ಟಮ್ ಆಗಿರತಕ್ಕ ನಿರ್ಣಯ. ಇದನ್ನು ವಿರೋಧ ಮಾಡಬೇಕೇ ಅಥವಾ ಸಪೋರ್ಟ್ ಮಾಡಬೇಕೇ ಎಂಬುದು ಕಷ್ಟವಾದ ವಿಚಾರ. ಇದರಲ್ಲಿ ನಾನು ಇಷ್ಟುಮಾತ್ರ ಸ್ಪಷ್ಟವಾಗಿ ಹೇಳುತ್ತೇನೆ. ಇಂಥಾ ರಾಜಕೀಯಕ್ಕೆ ಸಂಬಂಧಪಟ್ಟ ಅನೇಕ ನಿರ್ಣಯಗಳು ಅವಸರ ಅವಸರವಾಗಿ ತೀರ್ಮಾನವನ್ನು ತೆಗೆದುಕೊಳ್ಳುವುದನ್ನು ಬಿಟ್ಟು ಸ್ವಲ್ಪ ದೀರ್ಘವಾದಿ ಯೋಚನೆ ಮಾಡಿ ಲೆಕ್ಕ ಹಾಕಿ ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ

ಇಂಥಾ ವಿಚಾರಗಳಲ್ಲಿ ಸರ್ಕಾರ ಇದರ ಬಗ್ಗೆ ಸಾಕಾದಷ್ಟು ದಿಟ್ಟತನದಿಂದ ಹಾಗೂ ಒಂದು ಕಠಿಣವಾದ ರೀತಿನೀತಿಯನ್ನು ಅನುಸರಿಸದೆ ಹೋದರೆ ಯಾವೊತ್ತಿಗೂ ಭಾರತಕ್ಕೆ ಪೆಟ್ಟು ತಗಲುತ್ತದೆ ಎಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಂಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ಈ ಒಂದು ತಿದ್ದುಪಡಿ ಮಸೂದೆ ಏನಿದೆಯೋ ಅದನ್ನು ಕುರಿತು ನಾನು ಮಾತನಾಡುವುದಕ್ಕೆ ಮುಂಚೆ ಅದಕ್ಕೆ ಬೆಂಬಲ ನೀಡಬೇಕೋ ಅಥವಾ ಬೆಂಬಲ ನೀಡಕೂಡದೋ ಎಂಬುದಾಗಿ ಮಾನ್ಯ ಸದಸ್ಯರಾದ ಶ್ರೀ ಶಾಮಣ್ಣ ನವರು ಒಂದು ರೀತಿಯಲ್ಲಿ ಸಂಶಯವನ್ನು ವ್ಯಕ್ತಪಡಿಸಿದರು. ಆದರೆ ನನಗೆ ಆ ರೀತಿಯ ಸಂಶಯ ವೇನೂ ಇಲ್ಲ. ಏಕೆಂದರೆ ಇದರಲ್ಲಿ ಬೆಂಬಲ ನೀಡದೇ ಇರುವ ಪ್ರಶ್ನೆ ಅಥವಾ ಸಮಸ್ಯೆ ಯಾವುದೂ ಇಲ್ಲ. ಈ ಮಸೂದೆಯಲ್ಲಿ ಹೊಸದೇನು ಅಂಶಗಳಿಲ್ಲ. ಹಿಂದಿನಿಂದ ನಡೆದುಕೊಂಡು ಬಂದ ವಿದ್ಯ ಮಾನಗಳನ್ನು, ಸಂಬಂಧಗಳನ್ನು, ಒಂದು ಕಾನೂನಿನ ಚೌಕಟ್ಟಿನಲ್ಲಿ ತೆಗೆದುಕೊಂಡು ಬಂದಿದ್ದಾರೆ ಎಂಬುದಾಗಿ ನನ್ನ ಅಭಿಪ್ರಾಯ. 1950ನೇ ಇಸವಿಯಲ್ಲಿ ಆದಂಥ ಒಪ್ಪಂದ, 1973ನೇ ಇಸವಿಯಲ್ಲಿ ಆದಂಥ ಮಾತುಕತೆಗಳು —ಇವೆರಡರ ಒಪ್ಪಂದದ ಚೌಕಟ್ಟಿನಲ್ಲಿ ಈಗ 1974 ರಲ್ಲಿ ಒಂದು ತಿದ್ದುಪಡಿ ವಿಧೇಯಕವಾಗಿ ಈ ಸಭೆಯಲ್ಲಿ ಬಂದಿದೆ. ನಮಗೂ ಸಿಕ್ಕಿಂ ಜನತೆಗೂ ಹಾಗೂ ಸಿಕ್ಕಿಂ ರಾಜ್ಯದ ಆಡಳಿತ ವರ್ಗಕ್ಕೂ ನಮ್ಮ ದೇಶದ ಜನತೆಗೂ ಹಾಗೂ ಆಡಳಿತ ವರ್ಗಕ್ಕೂ ಸೌಹಾರ್ದಯುತವಾದ ಸಂಬಂಧ ಬೆಳೆದುಕೊಂಡು ಬಂದಿರುವುದು ಅನೇಕ ವರ್ಷಗಳ ಇತಿಹಾಸದಿಂದ ನಾವು ಕಾಣಬಹುದು. ಅಂತಹ ಸಂಬಂಧವನ್ನು ಇನ್ನೂ ಹೆಚ್ಚಿಗೆ ಬೆಳೆಸಿಕೊಳ್ಳಬೇಕೆಂಬ ದೃಷ್ಟಿಯಿಂದ ಈ ಒಂದು ಮಸೂದೆ ಮತ್ತು ಅದನ್ನು ಅಂಗೀಕರಿಸಲು ಇವತ್ತು ಒಂದು ನಿರ್ಣಯ ರೂಪವಾಗಿ ಈ ಸಭೆಯಲ್ಲಿ ಬಂದಿದೆ. ಆದರೆ ಅಂತಹ ಒಂದು ಸಂಬಂಧವನ್ನು ಕಡಿದು ಹಾಕಬೇಕೆಂಬ ದೃಷ್ಟಿಯಿಂದ ಇದನ್ನು ಈ ಸಭೆಯಲ್ಲಿ ತಂದಿದ್ದಾರೆಂದು ಯಾರಾದರೂ ಹೇಳಿದ್ದೇ ಆದರೆ ನಾನು ಅದನ್ನು ಒಪ್ಪುವುದಿಲ್ಲ. ನನಗೆ ತಿಳಿದಮಟ್ಟಿಗೆ ಹಿಂದಿನ ವೈಸ್‌ರಾಯ್‌ಗಳಿಗೆ ಮತ್ತು ಅಲ್ಲಿನ ರಾಜರಿಗೆ ಇದ್ದಂಥ ಸಂಬಂಧ, ಬ್ರಿಟಿಷ್ ಸಾಮ್ರಾಜ್ಯಷಾಹಿಗಳಿಗೆ ಇದ್ದಂಥ ಸಂಬಂಧ, ಮತ್ತು ಅಸೆಂಬ್ಲಿ ಮತ್ತು ಪಾರ್ಲಿಮೆಂಟ್‌ಗಳಲ್ಲಿ ಭಾರತ ಹಾಗೂ ಸಿಕ್ಕಿಂಗಳ ನಡುವೆ ಹೊದಲಿನಿಂದಲೂ ನಡೆದುಕೊಂಡು ಬಂದಿರುವ ಸಹಕಾರ ಹಾಗೂ ಸೌಹಾರ್ದಗಳ ಬಗ್ಗೆ ಚರ್ಚೆ ಮಾಡಿರುವುದನ್ನು ನೋಡಿದರೆ, ಅವರೂ ಸಹ ನಮ್ಮಂತೆ ಪ್ರಜಾಪ್ರಭುತ್ವ ರೀತಿನೀತಿಗಳಿಗನುಸಾರವಾಗಿ ಹೊಂದಿಕೊಂಡು ಹೋಗಬೇಕೆಂಬ ದೃಷ್ಟಿಯನ್ನು ಪಡೆದಿದ್ದಾರೆಂದು ನಾನು ಹೇಳಬಹುದು. ಅವರೂ ಸಹ ನಮ್ಮಲ್ಲಿರುವ ಹಾಗೆ ಪ್ರಜಾಪ್ರಭುತ್ವ ಪದ್ಧತಿ ಬೆಳೆಯಬೇಕೆಂದು ತೀರ್ಮಾನಮಾಡಿ ಅದಕ್ಕನುಸಾರವಾಗಿ ನಡೆಯುತ್ತಿದ್ದಾರೆ. ಸಾಮ್ರಾಜ್ಯ ಷಾಹಿ ವಿರೋಧಿ ತೀರ್ಮಾನ, ಪಾಳೆಯಗಾರರ ಪದ್ಧತಿ ವಿರೋಧಿ ತೀರ್ಮಾನಗಳು ಇದರ ಬಗ್ಗೆ ಏನೇ ಇದ್ದರೂ ನಾನು ಅವನ್ನು ವಿರೋಧಮಾಡುವುದಿಲ್ಲ. ನಾವು ಒಂದುವೇಳೆ ಆ ರೀತಿಯಾಗಿ ವಿರೋಧ ಮಾಡಿದ್ದರೆ, ನಾವು ಇನ್ನೂ ಹಳೆಯ ರೀತಿನೀತಿಗಳನ್ನು ಅನುಸರಿಸಬೇಕಾಗುತ್ತದೆ. ಈ ಮಸೂದೆಯಿಂದಾಗಿ ಅಮೇರಿಕಾ ಸಾಮ್ರಾಜ್ಯಷಾಹಿಗಳ ಮೇಲೆ ಪರಿಣಾಮ ಆಗುತ್ತದೆ, ಆದ ರಿಂದಾಗಿ ನಮ್ಮ ದೇಶದಲ್ಲಿ ಗಂಡಾಂತರ ಬರಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂದು ಕೆಲವರು ಹೇಳುವುದನ್ನು ನಾನು ಒಪ್ಪುವುದಿಲ್ಲ. ಹಿಂದೆ ನಮ್ಮಲ್ಲಿ ರಾಜಮಹಾರಾಜರುಗಳ ಆಳ್ವಿಕೆ ಇರಬೇಕೆಂದು ಹೇಳಿದಾಗ ಅದನ್ನು ನಮ್ಮ ದೇಶ ಒಪ್ಪಲಿಲ್ಲ. ಅನಂತರ ನಮ್ಮ ದೇಶದಲ್ಲಿ ರಾಜ ಮಹಾರಾಜರ ಆಳ್ವಿಕೆ ಕಿತ್ತು, ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಿದೆ. ಅದೇ ರೀತಿಯಲ್ಲಿ ಅಲ್ಲಿಯೂ ಜನತೆ ಆಳಬೇಕೆಂದು ತೀರ್ಮಾನ ಮಾಡಿದ್ದಾರೆ. ಹೀಗಿರುವಲ್ಲಿ ನಾವು ಅವರಿಗೆ ಇಲ್ಲಿ ಪಾರ್ಲಿಮೆಂಟ್ ಸದಸ್ಯರಾಗಿ ಅನುಕೂಲಗಳನ್ನು ಮಾಡಿಕೊಡುವುದರಲ್ಲಿ ಯಾವರೀತಿಯಲ್ಲಿಯೂ ತಪ್ಪಿಲ್ಲ. ಈ ಒಂದು ಸಂದರ್ಭದಲ್ಲಿ ನಾನು ಈಗ ಒಂದು ಎಚ್ಚರಿಕೆಯ ಮಾತನ್ನು ಹೇಳುತ್ತೇನೆ. ಈಗ ಏನಾಗಿದೆಯೆಂದರೆ, ಈ ರೀತಿಯಾಗಿ ಸಂಪರ್ಕ ಬೆಳೆಸಬೇಕೆ ನ್ನುವ ಜೊತೆಗೆ ನಮಗೂ ಅವರಿಗೂ ಒಂದು ರೀತಿಯ ಸ್ನೇಹ ಭಾವನೆ ಬೆಳೆಯಬೇಕು. ಇಲ್ಲದಿದ್ದರೆ ಸಿಕ್ಕಿಂ ರಾಜ್ಯದಲ್ಲಿ ಒಂದು ರೀತಿಯಾಗಿ ಅತೃಪ್ತಿ ಬೆಳೆಯುತ್ತದೆ. ಈಗ ಬಾಂಗ್ಲಾ ದೇಶ ಮತ್ತು ಪಾಕಿಸ್ತಾನಗಳಲ್ಲಿ ಪರಿಸ್ಥಿತಿ ಏನಾಗಿದೆಯೆಂದು ನಾವು ಹಣ ಕೊಟ್ಟರೂ ಅವರು ನಮ್ಮನ್ನು ಬೈಯ್ಯುತ್ತಿದ್ದಾರೆಂಬುದಾಗಿದೆ. ಇದರಲ್ಲಿ ಏನೂ ಅನುಮಾನವಿಲ್ಲ. ಏಕೆಂದರೆ ಆ ದೇಶಗಳ ಮೇಲೆ ನಮ್ಮಲ್ಲಿನ ನೌಕರಷಾಹಿ ಅಧಿಕಾರಿಗಳು ಅನೇಕಾವರ್ತಿ ಸರಿಯಾಗಿ ನಡೆದುಕೊಂಡಿಲ್ಲ. ತಂತಮ್ಮ ಪಟ್ಟಭದ್ರ ಹಿತವನ್ನು ಬೆಳೆಸುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಈ ನೌಕರಶಾಹಿ ಮನೋಭಾವ ಸಿಕ್ಕಿಂನಲ್ಲಿಯೂ ಬೆಳೆಸಲು ನಮ್ಮವರು ಪ್ರಯತ್ನಪಡಬಹುದು. ಈ ರೀತಿ ನಡೆಯುತ್ತಿರುವುದರಿಂದಲೇ ಆ ಜನಗಳ ಮಧ್ಯೆ ಅತೃಪ್ತಿ ಬೆಳೆಯುವುದಕ್ಕೆ ಅವಕಾಶ ವಾಗುತ್ತದೆ. ಆಗ ಒಳ್ಳೆಯ ಕೆಲಸ ಮಾಡಿದರೂ ನಮ್ಮ ಮೇಲೆ ನಾವೇ ಮಣ್ಣು ಹಾಕಿಕೊಳ್ಳುವ ಪ್ರಸಂಗಕ್ಕೆ ಕಾರಣವಾಗುತ್ತದೆ. ಆದ್ದರಿಂದ ಅಂತಹ ಅಧಿಕಾರಿಗಳನ್ನು ಸರಿಯಾದ ರೀತಿಯಲ್ಲಿಡಬೇಕು. ಸಿಕ್ಕಿಂ ಜನತೆಯ ನಡೆವಳಿಕೆಯಲ್ಲಿ ಮಧ್ಯೆ ಪ್ರವೇಶ ಮಾಡುವುದು, ಅಲ್ಲಿನವರಿಗೆ ಅಡ್ಡಿ ಆತಂಕಗಳನ್ನು ತರುವ ಪ್ರವೃತ್ತಿ ತೋರಿಸುವುದು ನಿಜವಾಗಿಯೂ ಸರಿಯಲ್ಲ. ಅಕ್ಷಮ್ಯ ಅಪರಾಧ. ಆ ರೀತಿ ನಡೆದಲ್ಲಿ ಅಮೇರಿಕಾ ಸಾಮ್ರಾಜ್ಯಷಾಹಿ ಹಾಗೂ ಚೈನಾ ದೇಶಗಳು ನಮ್ಮ ವಿರುದ್ಧ ಇನ್ನೂ ಹೆಚ್ಚಿನ ಅಪಪ್ರಚಾರ ಮಾಡಲು ಅವಕಾಶವಾಗುತ್ತದೆ. ಆದ್ದರಿಂದಲೇ ಅಲ್ಲಿನ ಜನತೆಯ

ವಿಷಯದಲ್ಲಿ ಹೆಚ್ಚಿನ ವಿಶ್ವಾಸವನ್ನು ಇಟ್ಟುಕೊಂಡು, ಸಿಕ್ಕಿಂ ಜನತೆಯ ಆಶೋತ್ತರಗಳನ್ನು ಈಡೇರಿಸಿ ಅವರ ಬಗ್ಗೆ ಸಹಕಾರ ಹಾಗೂ ಸೌಹಾರ್ದತೆಯನ್ನು ತೋರಿಸಿ ಅಲ್ಲಿನ ಆಡಳಿತವನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಬೆಳೆಸುವುದಕ್ಕೆ ಅವಕಾಶಮಾಡಿಕೊಡಬೇಕೆಂದು ಹೇಳಿ ನಾನು ಸಂಪೂರ್ಣವಾಗಿ ಈ ಶಾಸನಕ್ಕೆ ಬೆಂಬಲವನ್ನು ನೀಡಿ, ಈ ಸಭೆಯಲ್ಲಿ ಮಾನ್ಯ ಮಂತ್ರಿಗಳು ಮಂಡಿಸಿರುವ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

† Sri B. B. SAYANAK (Belgaum).—Madam Speaker, I rise to support this Bill which is passed by both the Houses of Parliament and which is tabled by our Hon. Minister for Parliamentary Affairs for ratification.

Madam Speaker, we must respect the wishes of the Sikkim people. There was a treaty in the year 1861 between the British Government and the Sikkim. It was declared that the Sikkim was a protectorate of India. According to me, Sikkim has a strategic position in the world politics. When our Parliament has passed this Bill, China and Paki tan were criticising India saying that India is grabbing Sikkim and so on. If the people of Sikkim or the representatives of Sikkim have passed a resolution to join as Associate State with India, what harm is there? But, one thing I want to mention here. According to our Constitution, there is no provision for Associate States. This is a new phenomenon or a new conception.

In the Constitution, Article 1 says as follows :—

"1. (1) India, that is Bharat, shall be a Union of States.

(2) The States and the territories thereof shall be as specified in the First Schedule.

(3) The territory of India shall comprise :—

(a) the territories of the States ;

(b) the Union territories specified in the First Schedule and

(c) such other territories as may be acquired.

11-30 A.M.

Is Sikkim merged in the Inadian territory? That is not the case. When Goa was independent, It was merged with India. This is not the case with Sikkim. Sikkim had its own constitution. They have got a right to elect one member to the Rajya Sabha and one member to the Lok Sabha. Now they have a right to elect the President and the Vice-President. Their election is not a direct one but our election to the Parliament is a direct one. This is a new phenomena which has been introduced in our Constitution. Our country has a Federal set up. When Sikkim is an Associate State, we will call it as a Federation. Our Constitution in this respect should be changed. Sikkim is a strategic point in respect of politics and defence. Bangala Desh is an independent and a free country. You are all aware what propaganda is going on against India. India is being criticised for its policies

(SRI B. B. SAYANAK)

There is scarcity and prices are going up. That is the propaganda that is going on in Bangla Desh. In Kashmir also, though we are spending crores and crores of rupees, yet we are not getting good friendship from the people of Kashmir. Our Prime Minister is trying to woo Sheik Abdulla who was behind the bar for sometime. Now he will be the Chief Minister of Kashmir. What is going on there also we must think over it. Our economic position is worse because we are giving financial aid to Bangala Desh and Kashmir. Taking into consideration all these aspects, I think, the Government of India will take precautionary measures and do justice to India.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ; ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿರತಕ್ಕ ಈ ಒಂದು ಸರ್ಕಾರಿ ನಿರ್ಣಯಕ್ಕೆ ನಾನು ನನ್ನ ಒಪ್ಪಿಗೆಯನ್ನು ನೀಡುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ನನ್ನ ಮನಸ್ಸಿನಲ್ಲಿ ನಮ್ಮ ರಾಜ್ಯಾಂಗಕ್ಕೆ ಸಂಬಂಧಪಟ್ಟಹಾಗೆ ಏನು ಕೆಲವು ಅನುಮಾನಗಳಿವೆ ಅವು ಬಹಳ ದೊಡ್ಡ ಅನುಮಾನಗಳು. ಆದುದರಿಂದ ಅವುಗಳನ್ನು ಈಗ ಪ್ರಸ್ತಾಪ ಮಾಡುವುದಕ್ಕಾಗಿ ನಾನು ನಿಂತಿದ್ದೇನೆ.

ಈ ನಿರ್ಣಯದ ಬಗ್ಗೆ ನಾನು ಮೊಟ್ಟಮೊದಲನೆಯದಾಗಿ ಇದನ್ನು ಸ್ವಾಗತ ಮಾಡುತ್ತೇನೆಂದು ಹೇಳಿದೆ. ಅದಕ್ಕೆ ಕಾರಣವಾದರೂ ಇಷ್ಟೇ; ಈ ದಿವನ ಸಿಕ್ಕಿಂ ರಾಜ್ಯದಲ್ಲಿರುವ ಜನತೆ ನಮ್ಮೊಂದಿಗೆ ಒಂದು ಮಧುರ ಬಾಂಧವ್ಯದಿಂದ ಇರುತ್ತೇವೆಂದೂ ಅವರು ನಮ್ಮ ವ್ಯವಹಾರದಲ್ಲಿ ಕೈಹಾಕಲು ಯಾವರೀತಿ ಅವಕಾಶ ಇರಬೇಕು ಅವರ ವ್ಯವಹಾರದಲ್ಲಿ ನಾವು ಕೈಹಾಕುವುದಕ್ಕೆ ಯಾವ ರೀತಿ ಅವಕಾಶವಿರಬೇಕು ಅಂದರೆ to participate in the developmental activities of our country. ಇಂಥದಕ್ಕೆ ಒಂದು ಅವಕಾಶವಿರತೇಬೇಕು; ಎಂಬ ಒಂದು ಹೇಳಿಕೆಯ ಬಗ್ಗೆ ಈಗಾಗಲೇ ನಮ್ಮ ಪಾರ್ಲಿಮೆಂಟಿನಲ್ಲಿ ಸುಧೀರ್ಘವಾದ ಚರ್ಚೆಗಳು ನಡೆದು ಅಲ್ಲಿ ಅನೇಕರು ಇದಕ್ಕೆ ಸ್ವಾಗತ ನೀಡಿದ್ದಾರೆ. ಅಷ್ಟೇ ಅಲ್ಲದೆ ಅವರು ರಾಜ್ಯಾಂಗದ ಬಗ್ಗೆ ಇರತಕ್ಕ ತೊಡಕಿನ ಬಗ್ಗೆಯೂ ಚರ್ಚೆಮಾಡಿದ್ದಾರೆ. ಆದರೆ ಈಗ ನಮ್ಮ ಮುಂದಿರುವುದು ಒಂದು ರ್ಯಾಟಿಫಿಕೇಷನ್ನಿನ ಪ್ರಶ್ನೆ. ನಮ್ಮ ರಾಜ್ಯಾಂಗಕ್ಕೆ ಯಾವುದಾದರೂ ಕಲಂ ಬಗ್ಗೆ ಒಂದು ತಿದ್ದುಪಡಿಯನ್ನು ಮಾಡಬೇಕಾಗಿ ಬಂದ ಸಂದರ್ಭದಲ್ಲಿ ಹೀಗೆ ರ್ಯಾಟಿಫಿಕೇಷನ್ ಹೇಳತಕ್ಕದ್ದು ಉಂಟು. ಅದರಂತೆ ಈಗ ರಾಜ್ಯಾಂಗದ 35ನೇ ತಿದ್ದುಪಡಿಯ ಬಗ್ಗೆ ರಾಜ್ಯದ ಶಾಸನ ಸಭೆಗಳ ಅಭಿಪ್ರಾಯವನ್ನು ಕೇಳಿದ್ದಾರೆ. ಆದರೆ ಇಂಡಿಯಾ ಸರ್ಕಾರದವರು ಈ ವಿಚಾರದಲ್ಲಿ ಒಂದು ಅಂತಿಮ ತೀರ್ಮಾನಕ್ಕೆ ಬರುವುದಕ್ಕೆ ಮೊದಲು ಒಂದು ವಿಷಯವನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ಆ ಸಿಕ್ಕಿಂ ದೇಶದವರೊಂದಿಗೆ ಸ್ನೇಹಮಾಡಿಕೊಳ್ಳಲು ನಮಗೆ ಇದ್ದಂಥ ಒಂದು ಅವಕಾಶವೇನಿತ್ತು ಅದನ್ನು ನಾವು ಕಳೆದುಕೊಂಡಿಲ್ಲ. ಅವರು ನಮ್ಮೊಡನೆ ಒಂದು ಮಧುರ ಬಾಂಧವ್ಯದಿಂದ ಇರುವುದಕ್ಕೆ ಅವರ ಒಪ್ಪಿಗೆಯನ್ನು ಸೂಚಿಸಿರುವುದಕ್ಕೆ ನಾವು ಅವರನ್ನು ಮೆಚ್ಚಿಕೊಳ್ಳಬೇಕಾಗಿದೆ. ಆದರೆ ಅಲ್ಲಿದ್ದ ಆ ರಾಜರು ಅಂದರೆ ಅವರ ಹೆಸರು ಚೋಗ್ಯಾಲ್ ಅಂತೋ ಏನೋ ಹೇಳುತ್ತಾರೆ. ಅವರಿಂದ ಅಧಿಕಾರ ಅವರಿಗೆ ಉಳಿಸಿಕೊಳ್ಳಬೇಕೆಂಬ ವಿಚಾರದಲ್ಲಿ ಅವರಿಗೂ ಸತತವಾದ ಪ್ರಯತ್ನಗಳನ್ನು ನಡೆಸುತ್ತಲೇ ಇದ್ದಾರೆ. ಅಲ್ಲಿಯ ಜನತಾ ಸರ್ಕಾರವನ್ನು ಉರುಳಿಸಲು ಸತತ ಪ್ರಯತ್ನ ನಡೆಸುತ್ತಿದ್ದಾರೆಂಬುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ನಾವು ಇಲ್ಲಿ ಸ್ವಾಗತ ಮಾಡುವುದಕ್ಕೆ ಮುಖ್ಯ ಕಾರಣ ನಾವು ಪ್ರಜಾಪ್ರಭುತ್ವಾದಳಿತದ ಪ್ರೇಮಿಗಳು. ಅದಕ್ಕಾಗಿ ಸ್ವಾಗತ ಮಾಡಬೇಕು. ಆದರೆ ಇದರಲ್ಲಿ ಕೆಲವು ತೊಡಕುಗಳೂ ಇವೆ. ಈ ಮಸೂದೆಯಲ್ಲಿ ಹೇಳಿರುವಂತೆ ನಮ್ಮಲ್ಲಿ ಅಂದರೆ ಭಾರತದಲ್ಲಿ ಹಲವಾರು ರಾಜ್ಯಗಳಿರುವಂತೆ ಇದೂ ಒಂದು ರಾಜ್ಯ ನಮ್ಮಲ್ಲಿ ಇದ್ದ ಹಾಗೆ ಆಗುತ್ತದೆ ಎನ್ನಬಹುದೇ ಅನ್ನುವುದನ್ನು ನಾವು ಆಲೋಚಿಸಬೇಕಾಗಿದೆ.

ಮಾನ್ಯ ಅಧ್ಯಕ್ಷರೇ, ನಾನೀಗ ನಮ್ಮ ರಾಜ್ಯಾಂಗದ ವಿಧಿ ಒಂದು ಮತ್ತು ಎರಡನ್ನು ಓದಬೇಕೆಂದಿದ್ದೇನೆ—

ಕಾನ್ಸ್‌ಟಿಟ್ಯೂಷನ್‌ನ ಆರ್ಟಿಕಲ್ 1ರ ಸಬ್‌ಕ್ಲಾಸ್ 1 ಮತ್ತು 2ರಲ್ಲಿ ಹೀಗೆ ಹೇಳಿದೆ :—

"1. (1) India, that is Bharat, shall be a Union of states."

"1. (2) The States and the Territories thereof shall be as specified in the first schedule.

(3) The territory of India shall comprise :—

(a) the territories of the States ;

(b) the Union sterritories specified in the First schedule; and

(c) such other territories as may be acquired "

ಈಗಿರತಕ್ಕ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಒರಿಸ್ಸಾ, ವೆಸ್ಟ್ ಬೆಂಗಾಲ್ ಕಾಶ್ಮೀರ್ ಇತ್ಯಾದಿ ಇವೆ. ಇವಲ್ಲದೆ, ಯೂನಿಯನ್ ಟೆರಿಟರೀಸ್‌ಗೆ ಸೇರಿದ ಪಾಂಡಿಚೇರಿ ಮತ್ತು ಗೋವ ಡಾಮನ್ ಇವೆ. ಆರ್ಟಿಕರ್ ಒಂದರ ಪ್ರಕಾರ ಹೊಸದಾಗಿ ಟೆರಿಟರೀಸ್ ಅನ್ನು ಅಕ್ಸಯರ್ ಮಾಡಿಕೊಳ್ಳಬಹುದು. ನನ್ನ ಪ್ರಕಾರ (1)ರ ಕ್ಲಾಜ್ 2 ಮುಖ್ಯವಾದುದು.

Now I draw your attention to article 2 of the Constitution of India. It says :

"2. Parliament may by law admit into the Union or establish new States on such terms and conditions, as it thinks fit"

ಸಿಕ್ಕಿಂ ಭಾರತ ರಾಜ್ಯಾಂಗದಲ್ಲಿರತಕ್ಕ ಹಲವಾರು ರಾಜ್ಯಗಳಲ್ಲಿ ಇದೂ ಒಂದು ರಾಜ್ಯ ಆಗತಕ್ಕ ನಂದರ್ಭ ಬರುವ ಹಾಗೆ ಮಾಡಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇಲ್ಲಿರುವುದು ಆರ್ಟಿಕಲ್ (3)ರ ಪ್ರಕಾರ Parliament may by law :—

(a) form a new State by sepeparation of territory from any State or by uniting two or more States or parts of States or by uniting any territory to a part of any State ;

(b) increase the area of any State ; "

ಆರ್ಟಿಕರ್, 1, 2, 3 ಇದರಲ್ಲಿ ಬರತಕ್ಕ ವಿಷಯ ಇಷ್ಟೆ. ಒಂದು ರಾಜ್ಯವಾಗಿ ಸಿಕ್ಕಿಂ ಇರಬೇಕಾಗುತ್ತದೆ. ಅಥವಾ ಟೆರಿಟರೀಸ್ ಇರತಕ್ಕಂಥ ಘಟಕಗಳು ಇರತಕ್ಕಂಥ ಒಂದೊಂದು ರಾಜ್ಯವಾಗಿ ಇರುವಿಕೆ ಬೇಕಾಗುತ್ತದೆ. ಕಾನ್ಸ್‌ಟಿಟ್ಯೂಷನ್‌ನ 35ನೇ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ. ಆರ್ಟಿಕಲ್ 1, 2ರಲ್ಲಿ ಹೇಳುವ ಪ್ರಕಾರ ಇದು ಅಸೋಸಿಯೇಷನ್ ಆಗುತ್ತದೆ. ಅಗ್ರಿಮೆಂಟ್ ಪ್ರಕಾರ 35ನೇ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಾದರೆ, after all this Sikkim State will be an associate State ಇವತ್ತು ಸಿಕ್ಕಿಂ ಒಂದು ಅಸೋಸಿಯೇಟ್ ರಾಜ್ಯವಾಗತಕ್ಕ ನಂದರ್ಭ ಬರುತ್ತದೆ. ಇದು ಒಂದು ಸಾಂಗಿಕ ರಾಷ್ಟ್ರವಾಗಿ ಉಳಿಯುವುದಕ್ಕೆ ಸಾಧ್ಯವಾಯಿತು. ಆದ್ದರಿಂದ ಇಲ್ಲಿ ಅಸೋಸಿಯೇಷನ್ ಆಗತಕ್ಕ ಪದ ಪ್ರಯೋಗ ಇದೆ. 35ನೇ ತಿದ್ದುಪಡಿಯನ್ನು ಒಪ್ಪುವುದರಿಂದ ಅನೇಕ ಎಡರುತೊಡರುಗಳು ಬರುತ್ತವೆ. ಈ ತಿದ್ದುಪಡಿಯನ್ನು ಒಪ್ಪುವುದರಿಂದ ಸಿಕ್ಕಿಂನ ಸದಸ್ಯರನ್ನು ನಾವು ಪಾರ್ಲಿಮೆಂಟಿನಲ್ಲಿ ಕೂಡಿಸುತ್ತೇವೆ. They will have all the benefits or the obligations embodied under the provisions of the Constitution of India.

ಇಲ್ಲಿ ಏನಾಗುತ್ತದೆಂದರೆ ರಾಜ್ಯಾಂಗದಲ್ಲಿರತಕ್ಕ ಹಕ್ಕುಗಳನ್ನು ಅವರು ಚಲಾವಣೆ ಮಾಡತಕ್ಕ ನಂದರ್ಭ ಪಡೆಯಬೇಕು. ಅವರು ಪಾರ್ಲಿಮೆಂಟ್ ಸದಸ್ಯರಾಗಿ ಬಂದಮೇಲೆ ಡ್ಯೂಟೀಸ್, ಪ್ರಿವಿಲೇಜಸ್ ಏನು ಇವೆ ಅವೆಲ್ಲವನ್ನೂ ಕೂಡ ಉಪಯೋಗ ಮಾಡತಕ್ಕ ಶಕ್ತಿಯನ್ನು ಹೊಂದಲೇಬೇಕಾಗುತ್ತದೆ. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಇವತ್ತು ಅವರು

(ಶ್ರೀ ಎಸ್. ಬಂಗಾರಪ್ಪ)

ಪಾರ್ಲಿಮೆಂಟ್ ಸದಸ್ಯರಾಗಿ ಬಂದು ಕೂತುಕೊಂಡ ಮೇಲೆ ಸಂಪೂರ್ಣವಾಗಿ ಹಕ್ಕುಗಳನ್ನು ಚಲಾವಣೆ ಮಾಡತಕ್ಕ ಸಂದರ್ಭ ಇರಬೇಕು. ನಮ್ಮ ಕಾನ್‌ಸೆಪ್ಟ್ ಇರುವುದು, the concept of our Constitution is only a federation but not association. ಲೀಗಲ್ ಆಗಿ ಒಂದು ರಾಜ್ಯಘಟಕವಾಗಿ ನಮ್ಮ ದೇಶಕ್ಕೆ ಇದ್ದರೆ ಮಾತ್ರ ಅದು ಕಾನೂನು ಪ್ರಕಾರ ಆಗುತ್ತದೆ, ಇಲ್ಲದೆ ಹೋದರೆ ಅದು ಉಪಯೋಗಕ್ಕೆ ಬರುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. Will the citizen of Sikkim become citizens of India ? They can't. They will not have the fundamental rights, they will have no rights and duties, obligations, and the privileges embodied under the Constitution ಈ ತಿದ್ದುಪಡಿಯನ್ನು ನಾನು ಒಪ್ಪುವುದಾದರೆ merely getting some of the representatives from the territory of Sikkim and seating them in the Parliament will not give the complete representation to the people of Sikkim. That is the main crux of my argument. ಆದ್ದರಿಂದ ನಾನು ಹೇಳುವುದು ಏನು ಎಂದರೆ, ಈ 35ನೇ ತಿದ್ದುಪಡಿ ಲೋಕಸಭೆಯಲ್ಲಿ, ರಾಜ್ಯ ಸಭೆಯಲ್ಲಿ ಸಾಕಷ್ಟು ಚರ್ಚೆ ಮಾಡಿದ್ದಾರೆ, ನಾನು ಇದನ್ನು ಸಂಪೂರ್ಣವಾಗಿ ಆಳವಾಗಿ ಅಭ್ಯಾಸ ಮಾಡದಿದ್ದರೂ ಕೂಡ ನಮ್ಮ ರಾಜ್ಯಾಂಗದಲ್ಲಿರತಕ್ಕ ಚೌಕಟ್ಟಿನೊಳಗೆ ನಮ್ಮ ರಾಜ್ಯಗಳೇ ಬರುವ ಹಾಗಿಲ್ಲ ಎಂದರೆ ಅದು ನನ್ನ ಗರ್ಥವಾಗುವುದಿಲ್ಲ. ಈ ವಿಷಯದ ಬಗ್ಗೆ ಅನುಮಾನ ಇದೆ. ಮಾನ್ಯ ಸಚಿವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಇದರ ಬಗ್ಗೆ ಕ್ಲಾರಿಫೈ ಮಾಡುತ್ತಾರೆಂದು ನಂಬಿ, ಸಿಕ್ಕಿಂ ಜನರನ್ನು ಸ್ವಾಗತ ಮಾಡುತ್ತೇನೆ. ಅವರು ನಮ್ಮ ದೇಶಕ್ಕೆ ಬಂದು ಸೇರಲಿ. ಮಿಲಿಟರಿ ಪಾಯಿಂಟ್ ಬಗ್ಗೆ ಒಂದು ವಿಷಯ ಇದೆ, Whether it is a strategic point or not

ಕೊನೆಯದಾಗಿ, ನಾನು ಹಿಂದೆ ಹೇಳಿದಂತೆ ನಮ್ಮ ದೇಶಕ್ಕೆ ಸೇರಲಿ, ಅಥವಾ ಅದು ಒಂದು ರಾಜ್ಯವಾಗಲಿ ಇದರ ಬಗ್ಗೆ ರಾಜಾಂಗದಲ್ಲಿ ತಕ್ಕ ಅವಕಾಶ ಬೇಕು. ಈ ಬಗ್ಗೆ ತಲೆದೋರಿರುವ ತೊಡಕುಗಳಿಗೆ ಮಾನ್ಯ ಸಚಿವರು ಉತ್ತರಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri S. M. KRISHNA** (Minister for Industries and Parliamentary Affairs).—Madam Speaker, certain very valid issues have been raised by hon. Member Sri Bangarappa. I don't know how competent I am to provide all the answers to the issues that he has raised. But this much I must respectfully submit that this amendment of the Constitution adds a new dimension to the Indian Constitution. This is a step in an innovated direction. So far the Constitution created new States-Karnataka was a creation of Const tution-there the Constitution has also powers to give status. But no where it has been contemplated at least till now to provide an associate status to a State. To that extent, I must confess that this is an innovation, this is an experiment. But without going into the technicalities or the constitutional aspects I would only like to submit to this House that this has eminated because of the desire of the people of Sikkim and of the desire of the representatives of the Sikkim. If they want representation in the Lok Sabha and in the Rajya Sabha and if they want an associate status I don't see any reason why we should come in their way. Some of the Questions raised by the hon. Members have already been gone into by the Select Committee of the Parliament and probably if we go into the deliberations of the Select Committee we may find answers to these questions. But I am amazed at the arguments advanced by hon. Members Mr T. R. Shamanna and Mr. B. B. Sayanak. They drew my attention to the expenditure involved in giving an

associate status to the Sikkim State. Mr. Shamanna mentioned even the figures six lakhs or whatever it is. I would like Mr. Shamanna to pause for a while and think about the tremendous logistics and strategic advantages that we would be gaining by giving Statehood to Sikkim Now, India's foreign policy has always been guided in trying to develop good neighbourly relations with our neighbours and with Sikkim we have a very special relationship. By ratifying this amendment we will further cement the relationship between Sikkim and India. Vested interests, as pointed out by Mr. Bangarappa, and countries which are not too favourably disposed towards India raise hue and cry about this. The bluff of these people with a grabbing mentality has been called. We are only honouring the sentiments of the people of Sikkim the elected Governor of Sikkim and Chogyal of Sikkim. I am grateful that alround support has been extended to this Bill.

Sri S. BANGARAPPA —The Hon. Minister for Parliamentary Affairs just now said that he is not in a position to answer these technicalities of the provisions of the Constitution of India. I asked whether the State of Sikkim will be sharing part of our Union territory or whether it really becomes a part and parcel of our country. The Hon. Minister said he is not in a position to answer. I suggest to the Hon. Minister through the Chair that we shall not reduce this august House to a post office status. We have got some responsibility here. I request the Hon. Minister to advance his illuminating arguments to support the stand taken by the Government of India in giving associate membership to the State of Sikkim. That is why we shall not simply brush up the technicalities of the Constitution of India. I request the Hon. Minister to enlighten us about the exact legal position of Sikkim when it really gets some relationship with the territory of India.

Sri S. M. KRISHNA.—The Hon Member has raised. as I said, many issues to which answers are provided in the deliberations of Lok Sabha, Rajya Sabha and the Select Committee. That is why I request Mr. Bangarappa to spare time to go through the deliberations.

Sri S. BANGARAPPA.—The Hon. Minister can take time and submit a reply. He is expected to go deep into these technicalities also. This is an amendment to the Constitution of India. This is not a small matter.

Sri S. M. KRISHNA.—Whoever said it is a small matter. This is a very very important very crucial matter. I said this is an innovative thing that has been done. So, I cannot underestimate the importance of the Subject, nor of the issues which the hon. member has raised. It is a debatable point whether things which apply to the members of Parliament apply to the Sikkim representatives also. Under the Disqualification Act, whatever disqualifies a man to become a Member of Parliament in India would apply to a member elected from Sikkim.

Sri S. BANGARAPPA.—No, No.

MADAM SPEAKER.—That is what he said it is a debatable point.

Sri S. M. KRISHNA.—Disqualification will be applicable according to my own assessment to the elected representat yes from Sikkim. That is my interpretation. Mr. Bangarappa may not agree. Let us leave it at that.

MADAM SPEAKER.—I will put the motion to the vote of the House.

> " That this House ratifies the amendments to the Constitution of India falling within the purview of the proviso to clause (2) of article 368 thereof, proposed to be made by the Constitution (Thirty-sixth Amendment) Bill, 1974- as passed by the two Houses of Parliament, which seeks to give effect to the wishes of the people of Sikkim for strengthening Indo-Sikkim co-operation and inter-reationship and the short title of which has been changed into The constitution (Thirty-fifth Amendment) Act, 1974."

The motion was adopted

We will go to the next subject—Motion of Thanks to Governor's Address.

Motion of Thanks to Governor's Address

(Sri K. Prabhakar stood up to read the Motion but there was interruption from Sri S. Bangarappa)

ಶ್ರೀ ಎಸ್. ಬಂಗಾರಪ್ಪ.—ಅವರು ಉತ್ತರ ಕೊಡಬೇಕು. He has not replied.

MADAM SPEAKER.—I cannot go back now.

Sri S. BANGARAPPA.—It is our right; we have to know the things in detail. The Minister has not replied.

ಅಧ್ಯಕ್ಷರು.—ಆ ವಿಷಯ ಮುಗಿದಿದೆ.

Sri S. BANGARAPPA.—He has not answered those points.

ಅಧ್ಯಕ್ಷರು.—ತಾವು ಕೇಳಿದ ತರಹವೇ ಅವರು ಉತ್ತರ ಕೊಡಬೇಕೇ ?

Sri S. BANGARAPPA.—I have not asked the Government to answer in my own fashion.

MADAM SPEAKER.—This is what he has said ; it is a debatable point. We have passed on to the next subject ; now the matter ends.

Sri S. BANGARAPPA.—It cannot be reduced to a post office work in the Assembly. I charge the Minister that he has not come equipped. He has simply by-passed all the issues.

ಅಧ್ಯಕ್ಷರು.—ಪಾಸ್ ಮಾಡಿ ಆಯಿತು ತಿರುಗಿ ಏಕೆ ವಾಪಸು ಹೋಗುತ್ತಿದ್ದೀರಿ ? ಅಸೆಂಬ್ಲಿ ವಿಚಾರವಾಗಿ ತಾವು ಅಷ್ಟು ಹಗುರವಾಗಿ ಮಾತನಾಡಬಾರದು.